ಕರ್ನಾಟಕ ವಿಧಾನ ಸಭೆ

168 ಶ್ರೀ ಸಿದ್ದು ಸವದಿ (ತೇರದಾಳ್)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ 2009–10ನೇ ಸಾಲಿನಲ್ಲಿ ಮೀಸಲಿರಿಸಿದ ಅನುದಾನವೆಷ್ಟು?

2009–10ನೇ ಸಾಲಿನಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಯೋಜನಾ ಕಾರ್ಯಕ್ರಮದಡಿ ರೂ. 12,440.05 ಲಕ್ಷಗಳನ್ನು ಮೀಸಲಿರಿಸಿದೆ.

ಆ) ಸದರಿ ಅನುದಾನದಲ್ಲಿ ಇಲಾಖೆ (ಆಯವ್ಯಯ) ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು.

ಈ ಅನುದಾನದಲ್ಲಿ ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಬಾಗಲಕೋಟೆ ಜಿಲ್ಲೆಯಲ್ಲಿ ಇಲಾಖೆಯಿಂದ ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳೇನು? (ತೇರದಾಳ ಮತ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸುವುದು).

1) ಬಾಗಲಕೋಟೆ ಜಿಲ್ಲೆಯಲ್ಲಿ ಇಲಾಖೆ ವತಿಯಿಂದ ಕೈಗಾರಿಕೆಗಳ ಅಭಿವೃದ್ಧಿಗೆ ಲ್ಯಾಂಡ್ ಬ್ಯಾಂಕ್‌ನಡಿ 28908 ಎಕರೆ ಜಾಗ ಭೂಮಿಯನ್ನು ಗುರುತಿಸಲಾಗಿದೆ. ಈ ಜಿಲ್ಲೆಯಲ್ಲಿ ಸಿಮೆಂಟ್, ಸ್ಟೀಲ್ ಮತ್ತು ಆಹಾರ ವಲಯಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

2) ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಪವರ್‌ಲೂಮ್ ಕಾಂಪ್ಲೆಕ್ಸ್ ಸ್ಥಾಪಿಸಲು ಉದ್ದೇಶಿಸಲಾಗಿದೆ.

3) ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಸಿಡಾಕ್ ಮುಖಾಂತರ ಉದ್ಯಮ ಶೀಲತಾ ಜಾಗೃತ ಶಿಬಿರವನ್ನು ಜಿಲ್ಲೆಯ ಬೀಳಗಿ, ಬಾದಾಮಿ ಮತ್ತು ಹುನಗುಂದ ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾಗಿದೆ.

4) "ಕ್ಲಸ್ಟರ್ ಡೆವೆಲಪ್‌ಮೆಂಟ್"ರಡಿಯ ಯೋಜನೆಯನ್ನು ಸಿಡಾಕ್ ಸಂಸ್ಥೆ ವತಿಯಿಂದ ಕಾರ್ಯಕ್ರಮ ರೂಪಿಸಲಾಗುತ್ತಿದೆ.

5) ಜಿಲ್ಲೆಯ ನವನಗರದಲ್ಲಿ ಆಗ್ರೋಟೆಕ್ ಪಾರ್ಕ್‌ನ್ನು ಸ್ಥಾಪಿಸಿದ್ದು ಇಲ್ಲಿ ಆಹಾರ ಉತ್ಪನ್ನಗಳು ಮತ್ತು ಕೃಷಿ ಸಂಸ್ಕರಣ ಘಟಕಗಳ ಸ್ಥಾಪನೆಗೆ 258 ಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಲಾಗಿದ್ದು ಇಲ್ಲಿ ಕೆಐಎಡಿಬಿ ವತಿಯಿಂದ ರೂ. 226.00 ಲಕ್ಷ ಅಂದಾಜು ವೆಚ್ಚದಲ್ಲಿ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

6) ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಯೋಜನೆಯಡಿ ಕೈಗಾರಿಕೆ ಮತ್ತು ಸೇವಾ ಚಟುವಟಿಕೆಗಳಿಗೆ ರಾಷ್ಟ್ರೀಕೃತ / ಗ್ರಾಮೀಣ ಬ್ಯಾಂಕುಗಳಿಂದ ಸಾಲವನ್ನು ಮಂಜೂರು ಮಾಡಿ ಮಾರ್ಜಿನ್ ಮನಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

7) ವಿಶೇಷ ಘಟಕ ಯೋಜನೆ / ಗಿರಿಜನ ಯೋಜನೆಯಡಿಯಲ್ಲಿ ವಸತಿರಹಿತ ಕುಶಲಕರ್ಮಿಗಳಾಗಿ ಶೇ.90%ರಷ್ಟು ಕಾರ್ಯಗಾರವನ್ನು ನಿರ್ಮಿಸಲಾಗುತ್ತಿದೆ.

<u>ತೇರದಾಳ, ಜಮಖಂಡಿ ತಾಲ್ಲೂಕು</u> : ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2009–10ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ (PMEGP) ಸೃಷ್ಟಿ ಯೋಜನೆಯಡಿ ಕೈಗಾರಿಕೆ ಮತ್ತು ಸೇವಾ ಚಟುವಟಿಕೆಗಳಿಗೆ ರಾಷ್ಟ್ರೀಕೃತ / ಗ್ರಾಮೀಣ ಬ್ಯಾಂಕುಗಳ ವತಿಯಿಂದ ಸಾಲವನ್ನು ಮಂಜೂರು ಮಾಡಿ ಮಾರ್ಜಿನ್ ಮನಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ಮತ್ತು ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಯಡಿ ವಸತಿ ಕಾರ್ಯಗಾರವನ್ನು ನಿರ್ಮಿಸಲಾಗುತ್ತಿದೆ. ಅಲ್ಲದೆ ಹೊಸ ಕೈಗಾರಿಕಾ ನೀತಿ 2009–14ರ ಪ್ರಕಾರವಾಗಿ ಈ ಪ್ರದೇಶವು ಹಿಂದುಳಿದ ಪ್ರದೇಶವೆಂದು ಪರಿಗಣಿಸಿ ವಲಯ 3ರ ವ್ಯಾಪ್ತಿಯಲ್ಲಿ ಬರುತ್ತಿದ್ದು ಇಲ್ಲಿ ಸ್ಥಾಪನೆ ಮಾಡುವಂತಹ ಉದ್ದಿಮೆದಾರರಿಗೆ ಸರ್ಕಾರದ ವತಿಯಿಂದ ಉತ್ತೇಜನ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಪಡೆಯಲು ಅರ್ಹತೆ ಇರುತ್ತದೆ. ಈ ನಿಟ್ಟಿನಲ್ಲಿ ತಾಲ್ಲೂಕಿನಲ್ಲಿ ಉದ್ದಿಮೆಗಳನ್ನು ಪ್ರಾರಂಭಿಸಲು ಪ್ರಚಾರ ಸಭೆ / ಜಾಗೃತಿ ಶಿಬಿರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ಹೊಸ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಾಡಲಾಗುತ್ತಿದೆಯೇ ಹಾಗೂ ಜಮಖಂಡಿ ತಾಲ್ಲೂಕಿನ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿ ನೀಡುವುದು.

ಜಿಲ್ಲೆಯಲ್ಲಿ ಹೊಸ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು ಜಮಖಂಡಿ ತಾಲ್ಲೂಕಿನ ರಬಕವಿ–ಬನಹಟ್ಟಿ ಪಟ್ಟಣದಲ್ಲಿ ಪವರ್‌ಲೂಂ ಪಾರ್ಕ್ ಸ್ಥಾಪನೆಗೆ ಕ್ರಮ ಕೈಗೊಂಡಿದ್ದು ಇದರಲ್ಲಿ ರಬಕವಿ ಮತ್ತು ತೇರದಾಳ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 100 ಎಕರೆ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ.

ಉ) ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಲು ಉದ್ದಿಮೆದಾರರಿಗೆ ಇಲಾಖೆಯಿಂದ ನೀಡುವ ಸಹಾಯ–ಸಹಕಾರದ ವಿವರ ನೀಡುವುದು.

ರಾಜ್ಯದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ವಿವಿಧ ರೀತಿಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಒಳಗೊಂಡು ಹೊಸ ಕೈಗಾರಿಕಾ ನೀತಿಯ 2009–14 ನ್ನು ಜಾರಿಗೊಳಿಸಿದ್ದು, ಇದರಂತೆ ಕೆಳಕಂಡಂತೆ ಉತ್ತೇಜನ / ರಿಯಾಯಿತಿಗಳನ್ನು ಸಹಾಯ ಸಹಕಾರಗಳನ್ನು ನೀಡುವುದು.

1. ಬಂಡವಾಳ ಹೂಡಿಕೆ ಉತ್ತೇಜನಾ ಸಹಾಯಧನ.
2. ಮುದ್ರಾಂಕ ಶುಲ್ಕ ವಿನಾಯಿತಿ.
3. ನೋಂದಣಿ ಶುಲ್ಕ ವಿನಾಯಿತಿ.
4. ಭೂ ಪರಿವರ್ತನಾ ಶುಲ್ಕ ಮರುಪಾವತಿ.
5. ಪ್ರವೇಶ ತೆರಿಗೆ ವಿನಾಯಿತಿ.
6. ರಫ್ತು ಉದ್ದೇಶಿತ ಉದ್ಯಮಗಳಿಗೆ ಉತ್ತೇಜನಗಳು.
7. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.
8. ತ್ಯಾಜ್ಯ ಸಂಸ್ಕರಣ ಸ್ಥಾವರ ಘಟಕಗಳಿಗೆ ಸಹಾಯಧನ.
9. ಮೌಲ್ಯವರ್ಧಿತ ತೆರಿಗೆ ಮೇಲೆ ಬಡ್ಡಿ ರಹಿತ ಸಾಲ ಸೌಲಭ್ಯ.
10. ಆಂಕರ್ ಘಟಕಗಳಿಗೆ ಸಹಾಯಧನ.
11. ತಾಂತ್ರಿಕ ಉನ್ನತೀಕರಣ/ಉತ್ಪಾನ್ನ ಗುಣಮಟ್ಟ ಅಭಿವೃದ್ಧಿಗೆ ವಿವಿಧ ರೀತಿಯ ಸೌಲತ್ತುಗಳು
12. ಮಳೆ ಕೊಯ್ಲು ಘಟಕಗಳಿಗೆ ಸಹಾಯಧನ ಇತ್ಯಾದಿಗಳು.

ಅನುಬಂಧ

Budget Allocation for 2009-10

Sl. No.	Name of the Scheme & Head of Account		Budget Allocation for 2009-10	Remarks
1	2	3	4	5
1	ಸಂಸ್ಥೆಗಳಿಗಾಗಿ ಕೈಗಾರಿಕಾ ಮೂಲಭೂತ ಸೌಕರ್ಯಗಳು	Industrial Infrastructure for Institutions 4852-02-800-0-01	100.00	
2	ಮೂಲಭೂತ ಸೌಕರ್ಯ ಮತ್ತು ವಾಣಿಜ್ಯ ಉತ್ತೇಜನ	Infrasturcture Support and Trade Promotions 2852-82-800-0-46	700.00	
3	ಅರ್ಬನ್ ಹಾಫ್ ಸ್ಥಾಪನೆ ಮತ್ತು ವಸ್ತು ಪ್ರದರ್ಶನ ಕೇಂದ್ರಗಳು	Establishment of Urban 2852-80-800-0-47	135.00	
4	ರಾಜ್ಯದಲ್ಲಿನ ಸಣ್ಣ ಪ್ರಮಾಣೋದ್ಯಮ	Central Plan Scheme for conduct of Census of SSI	150.05	

	ಘಟಕಗಳ ಗಣತಿ ನಡೆಸಲು ಕೇಂದ್ರ ವಲಯ ಯೋಜನೆ	units in the State 2851-00-102-0-10		
5	ಪ್ರಧಾನ ಮಂತ್ರಿಯವರ ರೋಜಗಾರ್ ಯೋಜನೆಯಡಿ ಉದ್ಯಮಶೀಲರಿಗೆ ತರಬೇತಿ	Training of entrepreneurs under Prime Minister's Rozgar Yojana 2851-00-102-0-48	167.00	
6	ನಾರು ಸಹಕಾರಿ ಸಂಘಗಳಿಗೆ ರಿಯಾಯಿತಿ ಬದಲಾಗಿ ಎಂ.ಡಿ.ಎ.	MDA to Coir Co-operative in lieu of Rebate – Other expenditure 2851-00-106-0-11	60.00	
7	ಕ.ರಾ.ಹ.ನಿ.ಕ್ಕೆ ಸಂಪನ್ಮೂಲ ಬೆಂಬಲ	Resource Support to KSFC 2851-00-102-0-68	4847.00	
8	ಆಧುನೀಕರಣ/ತಾಂತ್ರಿಕ ತರಬೇತಿ	Modernisation/Technology/Training 2851-00-102-0-69 a) S.C.P = 307.80 b) T.S.P = 124.45 c) Others = 767.75	1200.00	
9	ವಿಶೇಷ ಕುಶಲತೆ ಅಭಿವೃದ್ಧಿ ಸಂಸ್ಥೆಗಳು	Specialised Skill Development Institutions 4851-00-102-0-09	20.00	
10	ಜಿ.ಉ.ಕೇಂ/ವಸತಿ ಗೃಹಗಳ ನಿರ್ಮಾಣ – ಕಟ್ಟಡಗಳು	Construction of DIC/TIC quarters 4851-00-102-0-12	150.00	
11	ಸಣ್ಣ ರೋಗಗ್ರಸ್ಥ ಘಟಕಗಳ ಪುನಃಶ್ಚೇತನಕ್ಕಾಗಿ ಮೂಲಧನ ಸಹಾಯ	Seed Money for Revival of Small Sick Units 6851-00-102-1-04	3.00	
12	ಕೈಗಾರಿಕಾ ವಿಕಾಸ	Kaigarika Vikasa 2851-00-102-0-70	570.00	

13	ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ	a) Suvarna Kayaka Kaushalya Abhivrudhi Yojane 2851-00-102-0-73 a) T.S.P = 65.50 b) Others = 772.50	838.00	
14	ಖಾದಿ ಮತ್ತು ಸಣ್ಣ ಕೈಗಾರಿಕೆ ಉತ್ಪನ್ನಗಳ ಮೇಲಿನ ರಿಯಾಯ್ತಿ	Rebate on Khadi & Village Industries Products 2851-00-102-0-74	500.00	
15	ಆಭರಣಗಳ ತರಬೇತಿ ಸಂಸ್ಥೆಗಳು	Jewellery Training Institute 4851-00-102-0-13	100.00	
16	ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ	a) Establishment of New Industrial Cluster **(SCP/TSP)** 2852-80-003-0-12	1200.00	
17	ಶಿವಮೊಗ್ಗ ಆಹಾರ ಪಾರ್ಕ್	a) Food Park, Shimoga 4851-00-800-5-00 a) SCP 162.00 b) TSP 65.50 c) Others 772.50	1000.00	
1	ಕರ್ನಾಟಕ ರಾಜ್ಯ ಸಣ್ಣ ಪ್ರಮಾಣ ಕೈಗಾರಿಕೆಗಳ ಸಂಘ, ಬೆಂಗಳೂರು – ಧನ ಸಹಾಯ/ಪರಿವಾರ	Karnataka State Small Scale Industries Association, Bangalore – Financial Assistance/Relief 2851-00-102-0-09	200.00	Nes Scheme
2	ಲಿಡ್ಕರ್ – ಬಂಡವಾಳ ಹೂಡಿಕೆ	LIDKAR – Investment 4851-00-200-0-02	500.00	New Scheme
		Total	**12440.05**	